**ಜೈನ್ ಕಾಲೇಜ್, ಜಯನಗರ.**

**ಪ್ರಥಮ ಪಿ.ಯು.ಸಿ – ಮಾದರಿ ಪ್ರಶ್ನೆಪತ್ರಿಕೆ – 2018**

**ಸಮಯ : 3.15 ಗಂಟೆ** **ವಿಷಯ:– ಕನ್ನಡ** **ಅಂಕಗಳು–100**

---

**ಅ–ವಿಭಾಗ**

**1. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:** **1X10=10**

1. ದಿವ್ಯಜ್ಞಾನಿ ಎಂದು ಯಾರನ್ನು ಕರೆಯಲಾಗಿದೆ?
2. ಚೆನ್ನಯ್ಯನು ಮಾಡುತ್ತಿದ್ದ ಕಾಯಕ ಯಾವುದು?
3. ಕಾರೆಂಬೊ ಕತ್ತಲಲ್ಲಿ ಎಂತಹ ಮಳೆ ಬಂತು?
4. ಮಾಯವಾಗಿರುವ ದ್ವೀಪ ಯಾವುದು?
5. ಊರಿನ ನೀರು ಎಲ್ಲಿ ನೆಲೆ ನಿಂತಿತ್ತು?
6. ಅಶೋಕನ ಸ್ತಂಭ ಎಲ್ಲಿದೆ ?
7. ಹುಲಿ ಕನ್ನಡಿಯಲ್ಲಿ ಕಂಡಿದ್ದೇನು?
8. ಬೋಳೇಶಂಖರನ ಊರು ಯಾವುದು?
9. ರಾಜಕುಮಾರಿಗೆ ಬಂದ ರೋಗ ಯಾವುದು?
10. ಕತ್ತಲೆಯ ನಿಜ ಜನಕ ಯಾರು?

**ಆ– ವಿಭಾಗ**

**2. (ಅ) ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ.** **2X4=8**

11. ಕಣ್ಣು ಹಾಗೂ ಕರ್ಣಗಳಿಗೆ ಶೃಂಗಾರ ಯಾವುದು?
12. ಶಿವನ ಮೇಲೆ ಚೆನ್ನಯ್ಯ ಮುನಿಸಿಕೊಳ್ಳಲು ಕಾರಣವೇನು?
13. ಸರಸ್ವತಿಯ ಸಚಿವ ಮಂಡಲದ ಸದಸ್ಯರು ಯಾರು?
14. ಹಕ್ಕಿಗಳು ತಮ್ಮ ಕಂಠಗಳಿಂದ ಏನೇನನ್ನು ಮಾರ್ಧನಿಸುತ್ತಿವೆ?
15. ಅಮ್ಮಿಯ ಪಾಲಿಗೆ ನಮಾಜ್ ಮತ್ತು ಈದ್ ಎಂದರೆ ಯಾವುದು?

**(ಆ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ.** **2X3=6**

16. ನಿಂಗಮ್ಮನ ಗಂಡ ಪ್ರಾಣ ಕಳೆದುಕೊಂಡದ್ದು ಹೇಗೆ?
17. ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ?
18. ರಂಗರಾವ್ ಸಮಾಧಿಯ ಮೇಲೆ ಬರೆದ ಹೇಳಿಕೆ ಯಾವುದು?
19. ರೈತ ಚಳವಳಿಗಳು ಎಲ್ಲೆಲ್ಲಿ ನಡೆದವು?

**(ಇ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ.** **2X3=6**

20. ಸಾವ್ಕಾರಣ್ಣನು ಆಸ್ತಿಯನ್ನು ಹೇಗೆ ಹಂಚಿದ?
21. ಸೈತಾನನು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ?
22. ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿ ಕೊಡುತ್ತವೆ?
23. ಬೋಳೇಶಂಕರ ಏನೆಂದು ಡಂಗೂರ ಸಾರಿಸುತ್ತಾನೆ?

**ಇ– ವಿಭಾಗ**

**3. (ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **2X3=6**

24. ರಾಮನ ಸೇವೆ ಸಂದುದೇ ತನಗೆ
25. ನೃಪತುಂಗನೇ ಚಕ್ರವರ್ತಿ! ಪಂಪನಲ್ಲಿ ಮುಖ್ಯಮಂತ್ರಿ !
26. ನಗುವ ಚಂದಿರ ಕೈಗಂಟಿಕೊಳ್ಳುತ್ತಿದ್ದಾನೆ

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **1X3=3**

27. ಮುದ್ದೆ ಮಾಡಲಿಕ್ಕೆ ಪಳಗಿದ ಕೈಗಳೇ ಬೇಕು
28. ನಾನು ಪಶ್ಚಾತಾಪದ ಬೆಂಕಿಯಲ್ಲಿ ಬೆಂದಿರುವೆ.

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **1X3=3**

29. ಒಂದು ಹೊತ್ತು ರೊಟ್ಟಿ ತಿನ್ನದಿದ್ದರೆ ನಾನೇನು ಸಾಯುವುದಿಲ್ಲ.
30. ತಲೆಯಿಂದ ಕೆಲಸ ಮಾಡುವುದು ಹೇಗೆಂದು ನಿಮಗೆ ಹೇಳಿಕೊಡುತ್ತೇನೆ.

**ಈ– ವಿಭಾಗ**

**4. (ಅ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ.** **3X4=12**

31. ಅಲ್ಲಮಪ್ರಭುವಿನ ವಚನಗಳ ಆಶಯವೇನು?
32. ಸೀತೆ ಕಲ್ಮರಂ ಕರಗುವಂತೆ ದುಃಖಿಸಿದ ಪರಿಯನ್ನು ವಿವರಿಸಿ.
33. ಹೆಣ್ಣಿಗೂ ಬದುಕುವ ಹಕ್ಕಿದೆ ಎಂಬ ಆಶಯವು ಕವಿತೆಯಲ್ಲಿ ಹೇಗೆ ಧ್ವನಿತವಾಗಿದೆ?
34. 'ಮುಟ್ಟಿಕೊಳ್ಳದೆ ಪವಿತ್ರನಾಗಿರಬೇಕೆಂದು' ಹೇಳುವ ಕವಿಯ ಮಾತಿನ ಅರ್ಥವೇನು? ವಿವರಿಸಿ

**(ಆ) ಈ ಕೆಳಗಿನ ಎರಡು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ.** **2X4=8**

35. ಕರಿಯನ ಜೀವನ ಹೇಗಿತ್ತು ? ಜನರು ಆತನನ್ನು ಕಾಣುವ ರೀತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ?
36. ಅನಾಥ ಬಾಲಕರಾಶ್ರಮವನ್ನು ಶಾಸ್ತ್ರಿ ಮಾಸ್ತರರು ಹೇಗೆ ಪ್ರಾರಂಭಿಸಿದರು? ಅದರ ಉದ್ದೇಶವೇನು?
37. ಹುಲಿಯು ನಾಪಿತನಿಂದ ತಪ್ಪಿಸಿಕೊಂಡ ರೀತಿಯನ್ನು ನಿರೂಪಿಸಿ.

**(ಇ) ಈ ಕೆಳಗಿನ ಎರಡು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ.** **2X4=8**

38. ಬೋಳೇಶಂಕರನ ಅಣ್ಣಂದಿರೇ ವಾಸಿ ಎಂದು ಪಿಶಾಚಿ ಹೇಳಲು ಕಾರಣವೇನು?
39. ತನ್ನ ಕನಸನ್ನು ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು?
40. ಯುದ್ಧ ಮಾಡಲು ಸೈನಿಕರು ಏಕೆ ನಿರಾಕರಿಸುತ್ತಾರೆ?
41. ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿ.

**ಉ– ವಿಭಾಗ**

**5. (ಅ) ಯಾವುದಾದರೂ ಒಂದು ಪದ್ಯಭಾಗವನ್ನು ಕುರಿತು ಭಾವಾರ್ಥ ಬರೆಯಿರಿ.** **1X5=5**

42. ನಿನ್ ಕೆಳೆಯಂ ಸುಯೋಧನ
ನಂ ನೋಡದೆ ನುಡಿಯದಪ್ಪಿಕೊಳ್ಳದೆ ಬೆಸನೇ
ನೆನ್ನದೆ ಜೀಯೆನ್ನದೆ ದೇ
ವೆನ್ನದೆ ಯೇಕುಸಿರದಿರ್ಪೆಯಂಗಾಧಿಪತೀ

42. ಧನ ಧನವೆನ್ನುವ ಧನದ ದಾಹಿಗಳು
ಮಾರಿಕೊಡರು ಭೂಮಿಯನು
ಮಹಲಿನ ಬುಡಗಳಲ್ಲಿ ಬಿರುಕುಗಳೆದ್ದಿವೆ
ಕೇಳರು ಮಾರಿಯ ಸದ್ದನು.

**(ಆ) ಈ ಕೆಳಗಿನ ಆರು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ:** **6X2=12**

43. ಈ ಪದಗಳ ಅರ್ಥ ಬರೆಯಿರಿ: ನಖ, ಪಥ
44. ಈ ಪದಗಳಿಗೆ ನಾನಾರ್ಥ ಬರೆಯಿರಿ: ಕೇಳಿ, ಗುರು
45. ಈ ಪದಗಳಿಗೆ ತದ್ಭವ ಬರೆಯಿರಿ: ಆಕಾಶ, ಕಾವ್ಯ
46. ಈ ನುಡಿಗಟ್ಟುಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ: ಆಶಾಕಿರಣ, ಮೊರೆಯಿಡು
47. ಈ ಪದಗಳನ್ನು ಬಿಡಿಸಿ ಬರೆಯಿರಿ: ರಾವಣಾರಿ, ಒತ್ತೊತ್ತಿ
48. ಈ ನಾಮಪದಗಳ ಗ್ರಾಂಥಿಕ ರೂಪ ಬರೆಯಿರಿ: ಕಳುಗಪ್ಪ, ಮಾಡ್ಕೊಳ್ದೇ
49. ಈ ಪದಗಳಿಗೆ ವಿರುದ್ಧಪದ ಬರೆಯಿರಿ: ಗುಣ, ವೀರ

**(ಇ) ಈ ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು ಪ್ರಬಂಧ ಬರೆಯಿರಿ.** **1X5=5**

50. ವಿದ್ಯಾರ್ಥಿಯ ಬದುಕಿನ ಗುರಿಗಳು
51. ಪರಿಸರ ಸಂರಕ್ಷಣೆ

**(ಇ) ಈ ಕೆಳಗಿನಗಳಲ್ಲಿ ಒಂದನ್ನು ಕುರಿತು ಪತ್ರಲೇಖನ ಬರೆಯಿರಿ.** **1X4=4**

52. ಕಾಲೇಜಿನ ವಾರ್ಷಿಕೋತ್ಸವ ಸಮಾರಂಭಕ್ಕೆ ಆಗಮಿಸುವಂತೆ ಕೋರಿ ನಿಮ್ಮ ತಾಯಿಗೆ ಪತ್ರ ಬರೆಯಿರಿ.
53. ನಿಮ್ಮ ಊರಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸುವಂತೆ ಕೋರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ.

**(ಈ) ಈ ಕೆಳಗಿನ ಗಾದೆಮಾತುಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ.** **1X4=4**

54. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ
55. ಕೈಕೆಸರಾದರೆ ಬಾಯಿ ಮೊಸರು